


**‘ಒಲಿಂಪಸ್‌ನ ದೇವತೆಗಳು  ನಮ್ಮೂರಿಗೆ ಆಗಮಿಸಲಿದ್ದಾರೆ
ರಿಯೊ ಡಿ ಜನ್ನೈರೊ ಮತ್ತಷ್ಟು ಸುಂದರವಾಗಿದೆ
ನಿಜವಾದ ಸರ್ವ ದೇವಮಂದಿರವಾಗಿದೆ..’**

–2012ರಲ್ಲಿ ಲಂಡನ್‌ನಲ್ಲಿ ಒಲಿಂಪಿಕ್ಸ್ ಧ್ವಜವು ಬ್ರೆಜಿಲ್‌ಗೆ ಹಸ್ತಾಂತರಗೊಂಡ ನಂತರ ರಿಯೊ ಡಿ ಜನ್ನೈರೊದ ಸಂಗೀತ ಸಂಯೋಜಕ ಅರ್ಲಿಂಡೊ ಕ್ರೂಜ್ ರಚಿಸಿದ್ದ ಧ್ಯೇಯಗೀತೆಯ ಒಂದು ತುಣುಕು ಇದು.

ಆಗಸ್ಟ್ 5 ರಿಂದ 21ರವರೆಗೆ ‘ಸಾಂಬಾ ನಾಡು‘ ಬ್ರೆಜಿಲ್‌ನಲ್ಲಿ ಒಲಿಂಪಿಕ್ಸ್ ಎಂಬ ಭುವನದ ಬೆಡಗು ಇಡೀ ವಿಶ್ವವನ್ನು ತನ್ನತ್ತ ಸೆಳೆಯಲಿದೆ. ಚಿನ್ನ, ಬೆಳ್ಳಿ, ಕಂಚಿನ ಪದಕಗಳನ್ನು ಕೊರಳಿಗೇರಿಸಿಕೊಂಡು ಸಂಭ್ರಮಿಸುವ ಕನಸು ಹೊತ್ತ ಸಾವಿರ, ಸಾವಿರ ಕ್ರೀಡಾಳುಗಳ ಮಹಾಮೇಳ ಇಲ್ಲಿ ನಡೆಯಲಿದೆ.

ಅಮೆಜಾನ್ ಅರಣ್ಯದ ನಾಡು ಬ್ರೆಜಿಲ್‌ನಲ್ಲಿ ಹೆಜ್ಜೆಗುರುತು ಮೂಡಿಸಲು ಜಗತ್ತಿನ 200 ದೇಶಗಳ 10,500 ಕ್ರೀಡಾಪಟುಗಳು ಸಿದ್ಧರಾಗಿದ್ದಾರೆ. ಅವರಲ್ಲಿ ಭಾರತದ 120 ಕ್ರೀಡಾಪಟುಗಳು ತಮ್ಮ ಸಾಮರ್ಥ್ಯವನ್ನು ಪಣಕ್ಕೊಡ್ಡಲಿದ್ದಾರೆ.

ಒಲಿಂಪಿಕ್ಸ್ ಪದಕ ಗಳಿಕೆಯಲ್ಲಿ ಸದಾ ಮುಂಚೂಣಿಯಲ್ಲಿರುವ ಚೀನಾ, ಅಮೆರಿಕ, ಜಪಾನ್, ಫ್ರಾನ್ಸ್, ಇಂಗ್ಲೆಂಡ್ ದೇಶಗಳೊಂದಿಗೆ ಸ್ಪರ್ಧಿಸಲು ಭಾರತದ ಬಳಗವು ರಿಯೊಗೆ ತೆರಳಿದೆ.

2008ರ ಬೀಜಿಂಗ್ ಒಲಿಂಪಿಕ್ಸ್‌ನ ಶೂಟಿಂಗ್‌ನಲ್ಲಿ ಚಿನ್ನ ಗೆದ್ದಿದ್ದ ಅಭಿನವ್ ಬಿಂದ್ರಾ  ರಿಯೊ ಒಲಿಂಪಿಕ್ಸ್ ಉದ್ಘಾಟನೆ ಸಮಾರಂಭದಲ್ಲಿ ತ್ರಿವರ್ಣ ಧ್ವಜವನ್ನು ಹಿಡಿದು ತಂಡವನ್ನು ಮುನ್ನಡೆಸಲಿದ್ದಾರೆ. ವೈಯಕ್ತಿಕ ಕ್ರೀಡೆಯಲ್ಲಿ ಚಿನ್ನದ ಪದಕ ಗೆದ್ದ ಏಕೈಕ ಭಾರತೀಯ ಕ್ರೀಡಾಪಟು ಬಿಂದ್ರಾಗೆ ಸಂದಿರುವ ಸೂಕ್ತ ಗೌರವ ಇದು. ಇದಲ್ಲದೇ 130 ಕೋಟಿ ಭಾರತೀಯರ ನಿರೀಕ್ಷೆಯ ಭಾರವೂ ಬಿಂದ್ರಾ ನಾಯಕತ್ವದ ತಂಡದ ಮೇಲಿದೆ.

2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಆರು ಪದಕಗಳನ್ನು ಮುಡಿಗೇರಿಸಿಕೊಂಡಿದ್ದ ಭಾರತ ಈ ಬಾರಿ ಪದಕ ಗಳಿಕೆಯಲ್ಲಿ ದುಪ್ಪಟ್ಟು ಸಾಧನೆ ಮಾಡುವ ವಿಶ್ವಾಸ ಗರಿಗೆದರಿದೆ.  ಅದಕ್ಕೆ ಕಾರಣಗಳೂ ಹಲವಾರಿವೆ.

ಜಾಗತೀಕರಣದ ಪೈಪೋಟಿಯಲ್ಲಿ ಎಲ್ಲ ರಂಗಗಳಲ್ಲಿಯೂ ಮುನ್ನುಗ್ಗುತ್ತಿರುವ ಭಾರತ ಕ್ರೀಡೆಯಲ್ಲಿಯೂ ಒಂದಷ್ಟು ಸುಧಾರಣೆ, ಬೆಳವಣಿಗೆಯ ವೇಗ ದಾಖಲಿಸುವ ಪ್ರಯತ್ನವನ್ನು ಕಳೆದ ಒಂದು ದಶಕದಲ್ಲಿ ಮಾಡಿರುವುದೇ ಈ ಆಶಾಭಾವನೆ ಮೂಡಲು ಸಾಧ್ಯವಾಗಿದೆ.

ಪ್ರತಿ ಒಲಿಂಪಿಕ್ಸ್‌ನ ಕೆಲವೇ ದಿನಗಳ ಮುನ್ನ ತಂಡಗಳ ಆಯ್ಕೆ ಮಾಡುವ ಸಂಪ್ರದಾಯ ಈ

## 36 ವರ್ಷಗಳ ನಂತರ ವನಿತೆಯರ ತಂಡಕ್ಕೆ ಸಿಕ್ಕ ಅವಕಾಶ

ಭಾರತದ ವನಿತೆಯರ ಹಾಕಿ ತಂಡ 36 ವರ್ಷಗಳ ನಂತರ ಒಲಿಂಪಿಕ್ಸ್‌ನಲ್ಲಿ ಆಡಲು ಅರ್ಹತೆ ಪಡೆದುಕೊಂಡಿದೆ. 1980ರಲ್ಲಿ ಮಹಿಳೆಯರ ತಂಡವು ಒಲಿಂಪಿಕ್ಸ್‌ನಲ್ಲಿ ಆಡಿತ್ತು. ನಂತರ ಅರ್ಹತೆ ಗಿಟ್ಟಿಸಲು ಸಾಧ್ಯವೇ ಆಗಿರಲಿಲ್ಲ.

2015ರಲ್ಲಿ ಯುರೊ ಹಾಕಿ ಚಾಂಪಿಯನ್‌ಷಿಪ್ ಫೈನಲ್‌ಗೆ ಲಗ್ಗೆ ಹಾಕಿದ್ದ ವನಿತೆಯರ ತಂಡವು ರಿಯೊ ಟಿಕೆಟ್ ಗಿಟ್ಟಿಸಿತ್ತು. ನಂತರ ಒಂದು ವರ್ಷದಲ್ಲಿ ರಿಯೊ ಸೇರಿದಂತೆ ವಿವಿಧೆಡೆ ನಡೆದ ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಆಡಿದೆ.

ಆದರೆ ರಿಯೊಗೆ ತೆರಳುವ ತಂಡದ ಆಯ್ಕೆಗೆ ನಾಲ್ಕು ದಿನಗಳು ಬಾಕಿಯಿದ್ದಾಗ (ಜುಲೈ 8) ನಾಯಕಿ ರಿತು ರಾಣಿ ಅವರನ್ನು ತಂಡದಿಂದ ಹೊರಹಾಕಿದ್ದು ವಿವಾದಕ್ಕೆ ಕಾರಣವಾಯಿತು. ಅವರ ಬದಲಿಗೆ ಸುಶೀಲಾ ಚಾನು ಅವರಿಗೆ ನಾಯಕಿ ಪಟ್ಟ ಕಟ್ಟಲಾಯಿತು.

ತಮ್ಮದೇ ಆದ ಛಾಪು ಮೂಡಿಸಲು ಭಾರತದ ಹಾಕಿ ಆಟಗಾರ್ತಿಯರಿಗೆ ಇದೊಂದು ಸುವರ್ಣಾವಕಾಶ. ಭಾರತ ತಂಡವು ತಮ್ಮ ಗುಂಪಿನಲ್ಲಿ ಅರ್ಜೆಂಟಿನಾ, ಆಸ್ಟ್ರೇಲಿಯಾ, ಬ್ರಿಟನ್, ಜಪಾನ್, ಅಮೆರಿಕ ತಂಡಗಳ ಸವಾಲು ಎದುರಿಸಲಿದೆ.

ಛತ್ತೀಸಗಢದಲ್ಲಿ ಹಾಲು ಮಾರಾಟ ಮಾಡುತ್ತ ಹಾಕಿ ಆಟದಲ್ಲಿ ಬೆಳೆದ ರೇಣುಕಾ ಯಾದವ್, ಬುಡಕಟ್ಟು ಜನಾಂಗದ ಸುನಿತಾ ಲಕ್ರಾ, ಲಿಲಿಮಾ ಮಿಂಜ್, ದೀಪ್ ಗ್ರೇಸ್ ಎಕ್ಕಾ. ನಮಿತಾ ಟೊಪ್ಪೊ, ಪ್ರತಿಭಾನ್ವಿತ ಆಟಗಾರ್ತಿಯರಾದ ಅನುರಾಧಾ ದೇವಿ, ರಾಣಿ ರಾಮಪಾಲ್, ವಂದನಾ ಕಟಾರಿಯಾ, ನಿಕ್ಕಿ ಪ್ರಧಾನ್ ಅವರಿಗೆ ಇದೊಂದು ಜೀವಮಾನದ ಸಾಧನೆಯೇ ಸರಿ.